(*c*) whether it has come to their notice that without paying compensation the land was surveyed and demarcation stones were fixed ?

A.—Sri N. RACHIAH (Minister for Social Welfare Excise and Prohibition).-

(*a*) Yes.

(*b*) Award has been passed; but the owner has not come forward to receive the compensation amount.

(*c*) No.

ಶ್ರೀಮತಿ ಕೆಂಪಮ್ಮ.—ಭೂಮಿ ಅಕ್ವೈರ್ ಆಗಿ ಎಷ್ಟು ಕಾಲವಾಯಿತು, ಭೂಒಡೆಯರಿಗೆ ಪರಿಹಾರವನ್ನು ಕೊಟ್ಟು ಎಷ್ಟು ತಿಂಗಳಾಯಿತು, ಅವರು ಹಣ ತೆಗೆದುಕೊಂಡು ಜಮೀನು ಬಿಡದೆ ಇರುವುದಕ್ಕೆ ಕಾರಣವೇನು ?

†ಶ್ರೀ ಎಚ್. ರಾಚಯ್ಯ.—ಈ ವಿಚಾರದಲ್ಲಿ ಸರ್ಕಾರದ ಮುಂಜೂರಾತಿ ಆಗಲೇ ಆಗಿದೆ. ಜಮೀನಿನ ಮಾಲೀಕರು ಹಣವನ್ನು ತೆಗೆದುಕೊಂಡಿಲ್ಲ. ಹಣವನ್ನು ತೆಗೆದುಕೊಂಡ ಕೂಡಲೇ ಭೂಮಿಯನ್ನು ಹಂಚುವ ವ್ಯವಸ್ಥೆ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀಮತಿ ಕೆಂಪಮ್ಮ.—(ಸಿ) ಭಾಗಕ್ಕೆ ಉತ್ತರವಾಗಿ ಇಲ್ಲವೆಂದು ಹೇಳಿದ್ದೀರಿ. ಕಲ್ಲುನೆಟ್ಟಿರುವುದು ಸರ್ಕಾರದ ಗಮನಕ್ಕೆ ಬಾರದೆ ಇದ್ದರೆ ಹಣವನ್ನು ಯಾರು ಮುಂಜೂರು ಮಾಡಿದರು ?

ಶ್ರೀ ಎಚ್. ರಾಚಯ್ಯ.—ಅವರು ಹಣ ತೆಗೆದುಕೊಳ್ಳದೆ ಇರುವುದರಿಂದ ಇನ್ನೂ ಕೂಡ ಅದನ್ನು ಹಂಚಿಲ್ಲ ; ಡಿಮಾರ್ಕೇಟ್ ಮಾಡಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಕ್ವಿಸಿಪ್ಡ್ ಆದ ಮೇಲೆ ತೆಗೆದುಕೊಳ್ಳುವುದಕ್ಕೂ, ಹಣ ಕೊಟ್ಟಮೇಲೆ ಸ್ವಾಧೀನಕ್ಕೆ ತಗೆದುಕೊಳ್ಳುವುದಕ್ಕೂ ವ್ಯತ್ಯಾಸ ವೇನಿದೆ ?

ಶ್ರೀ ಎಚ್. ರಾಚಯ್ಯ.—ಸಾಮಾನ್ಯವಾಗಿ ರೈತರಿಗೆ ಅನಾನುಕೂಲವಾಗಬಾರದೆಂದು ಪರಿಹಾರವನ್ನು ಕೊಟ್ಟಮೇಲೆ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತೇವೆ. ಆದುದರಿಂದ ಸ್ವಲ್ಪ ತಡವಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಕ್ವಿಸಿಷನ್ ಆಗುವ ಕಾಲದಲ್ಲಿಯೇ ಇಷ್ಟು ಹಣವನ್ನು ಕೊಡಬೇಕಾಗುತ್ತದೆ ಎನ್ನುವುದು ನರಕಾರದ ಗಮನದಲ್ಲಿರುವುದಿಲ್ಲವೇ ?

ಶ್ರೀ ಎನ್. ರಾಚಯ್ಯ.—ಎಷ್ಟೋ ಸಂದರ್ಭಗಳಲ್ಲಿ ಮೊದಲೇ ಹಣ ಒದಗಿಸುವುದಕ್ಕೆ ಆಗುತ್ತಿಲ್ಲ.

ಶ್ರೀ ಜಿ. ಎಂ. ಚಿನ್ನಸ್ವಾಮಿ.—ಇದರ ಪರಿಹಾರದ ಮೊಬಲಗು ಎಷ್ಟು ?

ಶ್ರೀ ಎನ್. ರಾಚಯ್ಯ.—ಬರೀ 39 ಗುಂಟೆ ಮಾತ್ರ ಇರತಕ್ಕದ್ದು. ಆದರೆ ಮೊಬಲಗಿನ ಇನ್ ಫರ್‌ಮೇಷನ್ ಇಲ್ಲಿಲ್ಲ. ಬೇಕಾದರೆ ತಮಗೆ ಒದಗಿಸಿ ಕೊಡುತ್ತೇನೆ.

———

Acquisition and Allotment of Paddy during the Current Year.

**Q.*—300. Sri V. SRINIVAS SHETTY (Coondapoor).—

Will the Government be pleased to state :—

(*a*) the total quantity of paddy proposed to be acquired by them during the current year ;

(*b*) the quota allotted to each of the districts ;

(*c*) the quantity of paddy acquired so far ;

(*d*) the number of licenses granted to traders in the districts of Shimoga and South Kanara ;

(*e*) the number of traders from South Kanara who have applied for licenses in the district Shimoga so far and how many of them have been granted licenses ?

A.—Sri K. F. PATIL (Minister for Agriculture and Food).—

(*a*) About 10,00,000 pallas of paddy.

(*b*) The following quotas for the purchase of paddy in the districts are fixed provisionally :—

		In pallas
Bangalore District	...	30,000
Kolar District	...	10,000
Tumkur District	...	45,000
Chitradurga District	...	20,000
Bellary District	...	10,000
Mysore District	...	1,50,000
Mandya District	...	1,50,000
Hassan District	...	50,000
Shimoga District	...	1,30,000
Chickmagalur District	...	30,000
Coorg District	...	75,000
South Kanara District	...	60,000
Belgaum District	...	500,000
Dharwar District	...	1,8,0000
North Kanara District	...	30,00
Bijapur District	...	10,000 ‡
Gulbarga District	...	10,000 ‡
Raichur District	...	4,000 ‡
Bidar District	...	4,000 ‡

‡Rice.

(*c*) Paddy	...	1,45,331
Rice	...	15,536

† Indicates that the remarks or speeches have not been revised by the member concerned.

(SRI K. F. PATIL)

(*d*) Shimoga ... 258
South Kanara ... 385

(*e*) 32 dealers from South Kanara have applied for licenses in Shimoga District. Five licenses have been issued so far.

Sri V. SRINIVAS SHETTY.—Do the Government acquire this paddy directly or through somebody else ?

Sri K. F. PATIL.—Both directly and through some agencies.

Sri V. SRINIVAS SHETTY.—If indirectly, through what agency do Government acquire this paddy ?

Sri K. F. PATIL.—We acquire it through millers and licence-holders.

Sri V. SRINIVAS SHETTY.—Where do they store the paddy which is acquired ?

Sri K. F. PATIL.—In Government godowns wherever they are there; otherwise in the mills of the millowners.

Sri V. SRINIVAS SHETTY.—Supplementary to (e). I find that eventhough 32 dealers have applied for licence, only 5 licences have been issued so far. Will the Government be able to say why the others have been refused ?

Sri K. F. PATIL.—'So far' means up to 13th February 1959. I have not been able to get the latest figures. The orders have been changed a little bit since then. If a man has got a licence in one district and if he wants to trade in another district, he will have to apply there and get the licence. Then enquiry will have to be made in the district in which his original shop is situated and a recommendation will have to be got from the District Officer there. That is why there is some delay.

Sri G. VENKATAI GOWDA.—May I know whether you have started releasing the paddy acquired for business ?

Sri K. F. PATIL.—I do not know how this arises out of this question. ಶಿವಮೊಗ್ಗದಲ್ಲಿ ಲೈಸೆನ್ಸಿಗಾಗಿ ಮಂಗಳೂರಿನ 32 ಜನ ಅರ್ಜಿ ಹಾಕಿದ್ದುದಕ್ಕೆ ಐದು ಜನಕ್ಕೆ ಮಾತ್ರ ಲೈಸನ್ಸನ್ನು ಕೊಡಲಾಗಿದೆ. ಮಂಗಳೂರು ಜಿಲ್ಲೆಯಲ್ಲಿರುವ ವರ್ತಕರ ಸಂಸ್ಥೆಗೆ ಶಿವಮೊಗ್ಗದಲ್ಲಿಯೂ ಲೈಸೆನ್ಸ್ ಕೊಡಬೇಕಾದರೆ ಅಲ್ಲಿನ ಡೆಪ್ಯುಟಿ ಕಮೀಷನರ ಶಿಫಾರ್ಸು ಆಗಬೇಕು. ಇದರಿಂದ ಸ್ವಲ್ಪ ತಡವಾಗುತ್ತದೆ. ಈಗ ಈ ಆರ್ಡರನ್ನೂ ಕೂಡ ತೆಗೆಯುಬೇಕು ಎಂದು ಮಾಡಲಾಗಿದೆ.

Sri A. R. BADRINARAYAN.—What is the total quantity of paddy that has gone out of Shimoga District so far ?

Sri K. F. PATIL.—81,664 pallas.

ಶ್ರೀ ಪಿ.ಜಿ. ಸಿದ್ಧಾಂತಿ.—ಬಿಜಾಪುರ ಜಿಲ್ಲೆಗೆ ಹತ್ತು ಸಾವಿರ ಪಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ. ಬಿಜಾಪುರದಲ್ಲಿ ಭತ್ತವನ್ನೇ ಬೆಳೆಯುವುದಿಲ್ಲ. ಇದರ ಪ್ರಪೋರ್ಷನ್ನು ಹೇಗೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಎಫ್. ಪಾಟೀಲ್.—ಮೊದಲಿದ್ದ ಆರ್ಡರಿನ ಪ್ರಕಾರ ಶೇಕಡ ಐವತ್ತರಷ್ಟು ಲೆವಿಯಂತೆ ತೆಗೆದು ಕೊಳ್ಳಬೇಕಾಗಿತ್ತು. ಈಗ ಮತ್ತೊಂದು ಆರ್ಡರಾಗಿದೆ. ಬೆಂಗಳೂರಿನಿಂದ ಮತ್ತು ಕೆ.ಜಿ.ಎಫ್. ನಿಂದ ಅಥವಾ ಎಲ್ಲಿಂದ ಬಂದರೂ ಅದರಲ್ಲೇ ಶೇಖರಣೆ ಮಾಡಬೇಕಾಗಿ ಬರುತ್ತದೆ. ರಾಯಚೂರಿಗಾಗಲೀ ಅಥವಾ ಬಿಜಾಪುರಕ್ಕಾಗಲೀ ಜಿಲ್ಲೆಗಳಿಂದ ಬಂದಿರುವುದರಲ್ಲಿಯೇ ತೆಗೆದುಕೊಳ್ಳಬೇಕಾಗಿದೆ. ಆದರೆ ಜನವರಿಯೊಳಗೆ ಎಷ್ಟು ತೆಗೆದುಕೊಂಡಿದ್ದರೋ ಅದನ್ನು ಮಾತ್ರ ಬಿಡಬೇಕು ಮತ್ತು ಏನನ್ನೂ ಕೊಡಬೇಕಾಗಿಲ್ಲ ಎಂದು ಆರ್ಡರನ್ನೂ ಕೂಡ ಕೊಡರಾಗಿದೆ.

Sri D. DEVARAJ URS.—Which is the agency through which paddy is purchased ?

Sri K. F. PATIL.—There is no regular agency fixed, but we purchase through merchants, millers and also directly from agriculturists.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತುಮಕೂರು ಡಿಫಿಸಿಟ್ ಏರಿಯಾ ಆಗಿದ್ದರೂ ಅಲ್ಲೇ ಜಾಸ್ತಿಯಾಗಿ ವಸೂಲು ಮಾಡಿದ್ದೀರಿ. ಎಷ್ಟು ವಸೂಲು ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ ?

ಶ್ರೀ ಕೆ. ಎಫ್. ಪಾಟೀಲ್.—ತುಮಕೂರಿನಲ್ಲಿ 2,870 ಪಲ್ಲಾಗಳು.

Sri A. S. PATIL.—On what basis have you fixed a quota of 1,80,000 pallas for Dharwar district ?

ಶ್ರೀ ಕೆ. ಎಫ್. ಪಾಟೀಲ್.—ಅಲ್ಲಿ ಎಷ್ಟು ಎಕರೆಯ ಮೇಲೆ ಎಷ್ಟು ಬೆಳೆಯುತ್ತದೆ ಎನ್ನುವುದನ್ನು ನೋಡಿ ಅದರ ಮೇಲೆ ನಿಗದಿ ಮಾಡಲಾಗಿದೆ.

Sri C. K. RAJAIAH SETTY.—Is there a time limit fixed and intimated to the Deputy Commissioner to sell the rice acquired as it will deteriorate if it is stored for six months ?

ಶ್ರೀ ಕೆ. ಎಫ್. ಪಾಟೀಲ್.—ಹೆಚ್ಚಾಗಿ ಭತ್ತವನ್ನೇ ಕರೆಕ್ಟು ಮಾಡಬೇಕೆಂದಿದೆ. ಆದರೆ ಅಕ್ಕಿಯನ್ನು ಕೂಡ ಕರೆಕ್ಟು ಮಾಡಲಾಗಿದೆ. ಹಾಗೆ ಮಾಡಿರುವ ಅಕ್ಕಿಯನ್ನ ಆ ತಕ್ಷಣವೇ ಇರುವ ಫೇರ್ ಪ್ರೈಸ್ ಡಿಪೋಗಳಲ್ಲಿ ಮಾರಾಟಮಾಡಲು ಏರ್ಪಾಡು ಮಾಡಲಾಗಿದೆ. ಈಗಲೂ ಕೂಡ ನಮ್ಮಲ್ಲಿ 370 ಫೇರ್ ಪ್ರೈಸ್ ಡಿಪೋಗಳಿವೆ. ಅಲ್ಲಿಗೆಲ್ಲ ಈ ಅಕ್ಕಿಯನ್ನು ಕಳುಹಿಸಲಾಗುತ್ತದೆ.

ಶ್ರೀ ಡಿ. ಮೂಕಪ್ಪ.—ಟಾರ್ಜೆಟ್ಟನ್ನು ನಿಗದಿ ಮಾಡಿದ್ದರೂ ಇನ್ನೊಂದು ಕಡೆ ಲೈಸೆನ್ಸುಕೊಟ್ಟು ಬೇರೆ ಜಿಲ್ಲೆಯಿಂದಲೂ ಮಾಲು ಬರದೇ ಇರಲು ಹೇಗೆ ಸಾಧ್ಯ?

ಶ್ರೀ ಕೆ. ಎಫ್. ಪಾಟೀಲ್.—ಒಂದು ಕಡೆಯಲ್ಲ ಲೈಸೆನ್ಸನ್ನು ತೆಗೆದುಕೊಂಡಮೇಲೆ ಇಡೀ ಸ್ಟೇಟಿನಲ್ಲೇ ಪೂರ್ತಿಯಾಗಿ ವ್ಯವಹಾರ ಮಾಡಕೂಡದು ಎನ್ನುವ ನಲುವಾಗಿಯೇ ಜಿಲ್ಲೆಯಲ್ಲಿ ನಡೆಸುವ ವ್ಯವಹಾರಕ್ಕೆ ಲೈಸೆನ್ಸನ್ನು ತೆಗೆದುಕೊಳ್ಳಬೇಕೆಂದು ಇದೆ. ಈಗ ಮಂಗಳೂರಿನ ಜನ ಶಿವಮೊಗ್ಗದಲ್ಲಿಯೂ ವ್ಯಾಪಾರ ನಡೆಸಲು ಲೈಸನ್ಸನ್ನು ತೆಗೆದುಕೊಳ್ಳಬೇಕು. ಇವನ್ನೆಲ್ಲ ಅಲ್ಲಿಯ ಜಿಲ್ಲಾಧಿಕಾರಿಗಳು ನೋಡಿ ಕೊಡಬೇಕು. ಇದರಿಂದ ಒಬ್ಬರಿಗೆ ಕಷ್ಟವಾಗುತ್ತದೆ, ಇನ್ನೊಬ್ಬರಿಗೆ ಸುಖವಾಗುತ್ತದೆ.

9 A.M.

Sri H. S. RUDRAPPA.—I want to know whether paddy is procured even now according to the provisions of the Food Procurement Order, 1959, or whether the provisions have been relaxed?

ಶ್ರೀ ಕೆ. ಎಫ್. ಪಾಟೀಲ್.—ಅದೇ ಆರ್ಡರ್ ಪ್ರಕಾರವೇ ಈಗಲೂ ಪ್ರೊಕ್ಯೂರ್‌ಮೆಂಟ್ ನಡೆದಿದೆ ಆದರೆ ಅದರಲ್ಲಿ harassment ಆಗದಂತೆ ನೋಡಿ ಕೊಳ್ಳಬೇಕೆಂದು ಮಾಡಿದೆ.

ಶ್ರೀ ಡಿ. ಮೂಕಪ್ಪ.—ನಾನು ಕೇಳಿದ್ದು ತಾವು ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಟಾರ್ಜೆಟ್ ಇಷ್ಟಿರ ಬೇಕೆಂದು ಗೊತ್ತುಮಾಡಿರುವಾಗ, ಆ ಕೊರತೆಯಿರುವ ಡಿಸ್ಟ್ರಿಕ್ಟಿನಿಂದಲೇ ಬೇರೆ ಡಿಸ್ಟ್ರಿಕ್ಟಿನವರು ಧಾನ್ಯವನ್ನು ತೆಗೆದುಕೊಂಡು ಹೋದರೆ, ಇನ್ನು ಆ ಡಿಸ್ಟ್ರಿಕ್ಟಿನ ಟಾರ್ಜೆಟ್ಟನ್ನು ಪೂರ್ತಿ ಮಾಡುವ ಬಗೆ ಹೇಗೆ?

ಶ್ರೀ ಕೆ. ಎಫ್. ಪಾಟೀಲ್.—ನದರ್ಜ್ ಜೋಳ್ ನೊಡನೆ transaction ಇರುವುದರಿಂದ ಈ ಕಷ್ಟ ಬಂದಿದೆ. Free movementಗೆ ಅವಕಾಶವಿರ ಬೇಕೆಂದಿರುವುದರಿಂದ ಅಲ್ಲಿಗೆ ಹೋಗಲು ಕೊಡ ಬೇಕಾಗುತ್ತಿದೆ. ಆದರೆ, ಹೆಚ್ಚಿಗೆ ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ಹೋಗುವುದನ್ನು ತಪ್ಪಿಸುವುದಕ್ಕೆ ಇರುವ ಮಾರ್ಗವೆಂದರೆ ಲೈಸೆನ್ಸ್ ಪದ್ಧತಿ ವಿಧಿಸುವುದು.

ಶ್ರೀ ಟಿ. ಕೆ. ಕಂಬಳಿ.—ಮೈಸೂರು ರಾಜ್ಯದಲ್ಲಿ ಹೆಚ್ಚಿಗೆ ಬತ್ತ ಬೆಳೆಯುವ ಪ್ರದೇಶ ಧಾರವಾಡವಲ್ಲದಿದ್ದರೂ ಅಲ್ಲೇಕೆ ಮಾಡಿದ್ದೀರಿ?

ಶ್ರೀ ಕೆ. ಎಫ್. ಪಾಟೀಲ್.—ಹೆಚ್ಚಿಗೆ ಬೆಳೆಯುವುದು ಸ್ವತ್ ಕೆನರಾ ಪ್ರದೇಶವಾದರೂ ಮೊದಲೇ ಬಹಳ ಮಾಲು ಅಲ್ಲಿಂದ ಹೋಗಿದೆ. ಧಾರವಾಡದಲ್ಲಿ ಎರಡು ಲಕ್ಷ ಹನ್ನೆರಡು ಸಾವಿರ ಚಿಲ್ಲರೆ ಎಕರೆಗಳಿದ್ದರೂ ಅಲ್ಲಿನ estimated production 16 ಲಕ್ಷ 93 ಸಾವಿರ ಪಲ್ಲಗಳಿಷ್ಟಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೂವತ್ತೆರಡು ಜನ ವರ್ತಕರುಗಳ ಪೈಕಿ ಐದು ಜನರಿಗೆ ಮಾತ್ರ ಲೈಸೆನ್ಸ್ ಕೊಟ್ಟಿದೆಯೆಂದು ಹೇಳಿದ್ದೀರಿ. ಮಿಕ್ಕವರಲ್ಲಿ ಯಾರುಯಾರಿಗೆ ಲೈಸೆನ್ಸ್ ಕೊಡದೆ ನಿಲ್ಲಿಸಿದೆಯೋ ಅವರಿಗೆ ಸ್ಥಳದ ಮಿಲ್ ಮಾಲೀಕರುಗಳು ಸ್ಥಳೀಯ ಆಹಾರದ ಅಧಿಕಾರಿಗಳ ಜೊತೆ ಸೇರಿಕೊಂಡು ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಫ್. ಪಾಟೀಲ್.—ಮೊದಲನಿಂದಲೂ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರು ಲೈಸೆನ್ಸ್ ಕೊಡುತ್ತಿರಲಿಲ್ಲ., ಸ್ವತ್ ಕೆನರಾ ಜಿಲ್ಲೆಗೆ ತೊಂದರೆಯಾಗುತ್ತದೆ ಎಂಬ ದೃಷ್ಟಿಯಿಂದ ಹೀಗೆ ಮಾಡಿತ್ತು.

ಶ್ರೀಮತಿ ಬನವರಾಜೇಶ್ವರಿ.—ರಾಯಚೂರಿನಲ್ಲಿ ಸಾವಿರ ಪಲ್ಲಾದ ಕೋಟಾವನ್ನು ಗೊತ್ತುಮಾಡಿದ್ದೀರಿ. ತಾವು collect ಮಾಡಿರುವುದೆಷ್ಟು? ಈಗ ಅಲ್ಲಿ distress ಪರಿಸ್ಥಿತಿಯಿರುವುದರಿಂದ, ಅಲ್ಲಿ fair price shop ಗಳನ್ನು set up ಮಾಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಕೆ. ಎಫ್. ಪಾಟೀಲ್.—ಈಗ 3,300 ಪಲ್ಲಾದಷ್ಟು collect ಮಾಡಿದ್ದೇವೆ. ಅಲ್ಲಿ fair price shopsಗೆ ಅವಶ್ಯಕತೆಯಿದ್ದರೆ, ತೆರೆಯುವುದಕ್ಕೆ ಡೆಪ್ಯುಟಿ ಕಮಿಷನರ್‌ರವರಿಗೆ ತಿಳಿಸಿದ್ದೇವೆ.

Sri F. H. MOHSIN.—It was replied by the Minister that South Kanara grows more paddy than any other district. . . ?

Sri K. F. PATIL.—The area is more.

Sri F. H. MOHSIN.—May I know why 1,80,000 pallas have been fixed for Dharwar District, though it does not grow more paddy than any other district?

ಶ್ರೀ ಕೆ. ಎಫ್. ಪಾಟೀಲ್.—Estimate Production ಎಷ್ಟು ಎಂದು ನಾನು ಆಗಲೇ ಹೇಳಿದ್ದೇನೆ. ಧಾರವಾಡದಲ್ಲಿ ಕಮ್ಮಿ ಏಕರೇಜ್ ಇದ್ದರೂ ಕೇವಲ ಎರಡು ಲಕ್ಷ ಚಿಲ್ಲರೆ ಎಕರೆಗಳಿದ್ದರೂ 16-17 ಲಕ್ಷ ಪಲ್ಲಾಗಳಷ್ಟು ಬತ್ತದ ಬೆಳೆಯಾಗಿದೆ. ಅಲ್ಲದೆ, ಅಲ್ಲಿ ಜೋಳವನ್ನುವವರು ಜಾಸ್ತಿಯಿರುವುದರಿಂದ, ಅಲ್ಲಿ ಬತ್ತ surplus ಆಗುತ್ತದೆ; ಮಂಗಳೂರಿನಲ್ಲಿ ಅಕ್ಕಿ ತಿನ್ನುವವರು ಜಾಸ್ತಿಇರುವುದರಿಂದ ಅಲ್ಲಿಗೆ ಅಕ್ಕಿ ಜಾಸ್ತಿ ಬೇಕಾಗುತ್ತದೆ.

ಶ್ರೀ ಎಸ್. ನುಬ್ಬಯ್ಯ ನಾಯಕ್.—ದಕ್ಷಿಣ ಕೆನರಾದಲ್ಲಿ 30 ಮುಂದಿ ಲೈಸೆನ್ಸ್ ಕೇಳಿದ್ದವಕ್ಕೆ, ಐದು ಮಂದಿಗೆ ಮಾತ್ರ ಲೈಸೆನ್ಸ್ ಕೊಟ್ಟಿದ್ದೀರಿ. ಲೈಸೆನ್ಸ್ ಇಲ್ಲವೆಂದರೆ, ಅವರುಗಳು ಅಕ್ಕಿ, ಭತ್ತದ ವ್ಯಾಪಾರ ಮಾಡಕೊಡದೆಂದು ತಮ್ಮ ಅಭಿಪ್ರಾಯವೇ?

ಶ್ರೀ ಕೆ. ಎಫ್. ಪಾಟೀಲ್.—ಲೈಸೆನ್ಸ್ ಇಲ್ಲದೆ 50 ಮಣಕ್ಕಿಂತ ಜಾಸ್ತಿ ದಾಸ್ತಾನು ಮಾಡುವುದಕ್ಕಾಗುವುದಿಲ್ಲ.

Sri M. RAMAPPA.—Is the procurement satisfactory to meet the food situation in the State?

ಶ್ರೀ ಕೆ. ಎಫ್. ಪಾಟೀಲ್.—ಅದು satisfactory, unsatisfactory ಎಂದು ಪೂರ್ತಿಯಾಗುವವರೆಗೂ ಹೇಳುವುದು ಕಷ್ಟ. Procurement ತಡವಾಗಿ ಪುರುವಾಡಿದ್ದರೂ ಸಮಾಧಾನಕರವಾದ ರೀತಿಯಲ್ಲಿ ಶೇಖರಣೆಯಾಗುತ್ತಿದೆಯೆಂದು ಸದ್ಯಕ್ಕೆ ಹೇಳಬಲ್ಲೆ.